# 23

# ಯೆರೂಸಲೇಮಿನಲ್ಲಿ ಸಭೆಯ ಸ್ಥಾಪನೆ ಮತ್ತು ಬೆಳವಣಿಗೆ

## ಕ್ರಿ.ಶ. 30-35[1] (ಅಪೊಸ್ತಲರ ಕೃತ್ಯಗಳು 1-7)

### I. ಸಭೆಯನ್ನು ಸ್ಥಾಪಿಸಿದ್ದು.
### (ಅಪೊಸ್ತಲರ ಕೃತ್ಯಗಳು 1; 2.)

**1. ಸಭೆಯ ತಿರುಳು; ಕಾದಿರುವಿಕೆಯ ಹತ್ತು ದಿನಗಳು.**-ದಿವಾರೋಹಣದ ನಂತರ ಯೆರೂಸಲೇಮಿನಲ್ಲಿ ವಾಸಿಸುತ್ತಿದ್ದ ಅಥವಾ ಉಳಿದುಕೊಂಡಿದ್ದ ಶಿಷ್ಯರ ಸಂಖ್ಯೆಯು ಒಂದನೂರ ಇಪ್ಪತ್ತು. ಗಲಿಲಾಯದಲ್ಲಿದ್ದವರನ್ನೊಳಗೊಂಡು ಕನಿಷ್ಠಪಕ್ಷ ಐದುನೂರು ಜನರಿದ್ದರು (1 ಕೊರಿಂಥ 15:6). ಒಂದನೂರ ಇಪ್ಪತ್ತು ಜನರು ಪರಿಶುದ್ಧಾತ್ಮನ ವಾಗ್ದಾನದ ಅನುದಿನದ ನಿರೀಕ್ಷೆಯಲ್ಲಿದ್ದಾಗ ಪ್ರಾರ್ಥನೆಯಲ್ಲಿ ಮುಂದುವರಿದಿದ್ದರು. ಕಾದುಕೊಂಡಿದ್ದ ದಿನಗಳಲ್ಲಿ, ಪೇತ್ರನ ಸಲಹೆಯಂತೆ, ಯೂದನ ಆತ್ಮಹತ್ಯೆಯಿಂದ ಅಪೊಸ್ತಲರಲ್ಲಿ ಖಾಲಿಯಾಗಿದ್ದ ಸ್ಥಳವು ಮತ್ತೀಯನನ್ನು ಆಯ್ಕೆ ಮಾಡಿಕೊಳ್ಳಲ್ಪಡುವುದರಿಂದ ತುಂಬಿಸಲ್ಪಟ್ಟಿತು; ಅಪೊಸ್ತಲರಲ್ಲಿ ಅಗತ್ಯವಾದ ಅರ್ಹತೆಯು ಕ್ರಿಸ್ತನ ಪುನರುತ್ಥಾನಕ್ಕೆ ಸಾಕ್ಷಿಕೊಡಲು ಶಕ್ತನನ್ನಾಗಿ ಮಾಡುವಂತೆ ವೈಯಕ್ತಿಕ ಜ್ಞಾನವು ಇರಬೇಕಾಗಿತ್ತು (ಅಪೊಸ್ತಲರ ಕೃತ್ಯಗಳು 1:21, 22; 1 ಕೊರಿಂಥ 9:1).

**2. ಪರಿಶುದ್ಧಾತ್ಮನ ಬಾಪ್ತಿಸ್ಮ.**-*a. ಸಮಯ ಮತ್ತು ಜೊತೆಗಾರಿಕೆಗಳು.*-ಕ್ರಿಸ್ತನು ಪಸ್ಕದ ಸಮಯದಲ್ಲಿ ಶ್ರಮೆ ತಾಳಿದನು: ಆತನು ಐವತ್ತು ದಿನಗಳ ನಂತರ ಪಂಚಾಶತ್ತಮ ದಿನದಂದು, ಎರಡನೆಯ ದೊಡ್ಡ ಹಬ್ಬದಂದು ಬಂದನು. ಕಣ್ಣಿಗೆ ಮತ್ತು ಕಿವಿಗೆ ಆಕರ್ಷಿಸುವ ಜೊತೆಗಾರಿಕೆಗಳೊಂದಿಗೆ ಅದು ಬಂದಿತು - ಬಲವಾದ ಬಿರುಗಾಳಿ ಬೀಸುತ್ತಿರುವಂತೆ ಶಬ್ದ, ಅದು ಗಾಳಿಯಾಗಿರಲಿಲ್ಲ; ನಾಲಿಗೆಯಂತೆ - ಜ್ವಾಲೆಗಳು, ನಿಜ ವಾದ ಜ್ವಾಲೆಯಾಗಿರಲಿಲ್ಲ.

*b. ಶಿಷ್ಯರ ಮೇಲೆ ಅದರ ಪರಿಣಾಮಗಳು.*-ಹನ್ನೆರಡು ಜನರ ಮೇಲೆ ಅದರ ಪರಿಣಾಮಗಳು ತಕ್ಷಣದವುಗಳೂ, ಬಲವಾದವುಗಳೂ ಮಾರ್ಪಡಿಸುವಂಥವುಗಳೂ ಆಗಿದ್ದವು: "ಆಗ ಅವರೆಲ್ಲರು ಪರಿಶುದ್ಧಾತ್ಮ ಭರಿತರಾಗಿ ಆ ಆತ್ಮ ತಮ್ಮ ತಮಗೆ ನುಡಿಯುವ ಶಕ್ತಿಯನ್ನುಕೊಡುವ ಪ್ರಕಾರ ಬೇರೆಬೇರೆ ಭಾಷೆಗಳಿಂದ ಮಾತಾಡುವುದಕ್ಕೆ ಪ್ರಾರಂಭಿಸಿದರು."[2] ಆದರೆ ಅಲೌಕಿಕ ಒಳನೋಟ ಮತ್ತು ಬಲ ಮಾತ್ರವೇ ಪರಿಣಾಮ ಗಳಾಗಿರಲಿಲ್ಲ. ಅವರು *ನೈತಿಕವಾಗಿ* ಮಾರ್ಪಡಿಸಲ್ಪಟ್ಟಿದ್ದರು. ಅಂದಿನಿಂದ ರಾಜ್ಯದ ಬಗ್ಗೆ ಪ್ರಾಪಂಚಿಕವಾದ ತಿಳುವಳಿಕೆಗಳಿರಲಿಲ್ಲ, ಅದರಲ್ಲಿಯ ಪ್ರಮುಖ ಸ್ಥಳಗಳ ಮೇಲೆ ಹೋರಾಟ ಗಳಿರಲಿಲ್ಲ.

*c. ಅದರ ಸಾಕ್ಷ್ಯಧಾರದ ಮೌಲ್ಯ.*-ಯೇಸುವು ಆದರಿಕನ ಬರೋಣವನ್ನು ತನ್ನ ತಂದೆಯ ಕಡೆಗೆ ಹೋಗುವದರೊಂದಿಗೆ ಸಂಬಂಧಿಸಿದ್ದನು (ಯೋಹಾನ 15:26, 27;

16:7; ಹೋಲಿಸು 7:39; ಅಪೊಸ್ತಲರ ಕೃತ್ಯಗಳು 2:33). ಪಂಚಾಶತ್ತಮವು ಭೂಲೋಕಕ್ಕೆ ಅದು ತನ್ನ ಕರ್ತನನ್ನು ತಿರಸ್ಕರಿಸಿದ್ದಕ್ಕೆ ಉತ್ತರವಾಗಿದೆ; ಮುಳ್ಳಿನ ಕಿರೀಟವು ಮಹಿಮೆಯ ಕಿರೀಟಕ್ಕಾಗಿ ಬದಲಾಯಿಸಲ್ಪಟ್ಟಿದೆ ಎಂದು ಬಹಿರಂಗ ಪ್ರಕಟನೆಯಾಗಿದೆ; ಜನಾಂಗದ ಪಾಪದ ಮತ್ತು ಯೇಸುವಿನ ಮೆಸ್ಸೀಯತ್ವದ ಕಿರೀಟ ಪ್ರಾಯದ ರುಜುವಾತು.

*d. ಜನಸಮೂಹದ ಮೇಲೆ ಪರಿಣಾಮ.*-ತಕ್ಷಣವೇ ಅಪೊಸ್ತಲರ ಸುತ್ತಲೂ ಕೂಡಿಬಂದಿದ್ದ ಸಾವಿರಾರು ಜನರು ಆಶ್ಚರ್ಯಪಡುತ್ತಿರುವಾಗ, ಅವರಲ್ಲಿ ಪಾಪದ ಅರುಹನ್ನು ಹುಟ್ಟಿಸುವ, ಮಾರ್ಪಡಿಸುವ ಬಲದೊಂದಿಗೆ ಪರಿಶುದ್ಧಾತ್ಮನ ಬಾಪ್ತಿಸ್ಮವು ಬಂದಿತು; ಅಪ್ರತ್ಯಕ್ಷವಾಗಿಯಾದರೂ, ಪರಿಣಾಮಕಾರಿಯಾಗಿ, ಪೇತ್ರನ ತುಟಿಗಳಿಂದ ಹೊರಬಂದಂತೆ ಸುವಾರ್ತೆಯ ಮುಖಾಂತರ ಅದಾಗಿತ್ತು.

**3. ಪೇತ್ರನ ಪ್ರಸಂಗ; ಪರಿಣಾಮಗಳು.**-ಪೇತ್ರನು ಪ್ರತಿನಿಧಿ; ಅವನ ಕೇಳುಗರು, ಭಿನ್ನ ದೇಶಗಳಲ್ಲಿ ಜನಿಸಿದ ಯೆಹೂದ್ಯರು. ಪೂರ್ವಕಲ್ಪಿತ ದುರಾಗ್ರಹವನ್ನು ತೆಗೆದು ಹಾಕಲು ಸರಿಯಾದ ಪೀಠಿಕೆಯ ನಂತರ, ಅವನು ಯೇಸುವು ಕ್ರಿಸ್ತನು ಆದಾಗಿದ್ದನೆಂಬುದನ್ನು ರುಜುವಾತು ಪಡಿಸಲು ಮುಂದವರಿಯುತ್ತಾನೆ (1) ತನ್ನ ಪ್ರಸಿದ್ಧವಾಗಿದ್ದ ಕಾರ್ಯಗಳಿಂದ; (2) ತನ್ನ ಮರಣದಿಂದ, ದುಷ್ಟ ಜನರಿಂದ ತಿಳಿಯದೇ ಮಾಡಲ್ಪಟ್ಟಿದ್ದರೂ, ಅದು ದೇವರ ಒಂದು ಯೋಜನೆಯಾಗಿತ್ತು; (3) ಆತನ ಪುನರುತ್ಥಾನದಿಂದ, ಅದು ಪ್ರವಾದಿಗಳಿಂದ ಮುಂತಿಳಿಸಲ್ಪಟ್ಟಿತು ಮತ್ತು ಅಪೊಸ್ತಲರಿಂದ ದೃಢಪಡಿಸಲ್ಪಟ್ಟಿತು; (4) ತಂದೆಯ ಬಲಗಡೆಯಲ್ಲಿ ಆತನು ಮಹಿಮೆಗೇರಿಸಲ್ಪಟ್ಟಿದ್ದರಿಂದ, ಇದು ಪ್ರವಾದಿಗಳಿಂದ ಮುಂತಿಳಿ ಸಲ್ಪಟ್ಟಿತ್ತು ಮತ್ತು ಪಂಚಾಶತ್ತಮದ ಅದ್ಭುತ ಕಾರ್ಯದಿಂದ ದೃಢ ಪಡಿಸಲ್ಪಟ್ಟಿತು.

ಇವು ಪರಿಣಾಮಗಳು (1) ತೀಕ್ಷ್ಣವಾದ ಮನವರಿಕೆ; "ಹೃದಯದಲ್ಲಿ ಅಲಗು ನೆಟ್ಟಂತಾಗಿ"[3]; (2) ನೇರವಾದ ಪ್ರಶ್ನೆ: "ನಾವೇನು ಮಾಡಬೇಕು?"[4] (3) ಒಂದು ಸರಳ ವಾದ ಉತ್ತರ: "ದೇವರ ಕಡೆಗೆ ತಿರುಗಿಕೊಳ್ಳಿರಿ - ಪಾಪಗಳು ಪರಿಹಾರವಾಗುವುದಕ್ಕಾಗಿ - ಯೇಸುಕ್ರಿಸ್ತನ ಹೆಸರಿನಲ್ಲಿ - ಬಾಪ್ತಿಸ್ಮ ಮಾಡಿಸಿಕೊಳ್ಳಿರಿ - ನೀವು ಪರಶುದ್ಧಾತ್ಮ ವರವನ್ನು ಹೊಂದಿಕೊಳ್ಳುವಿರಿ"[5]; (4) ತಕ್ಷಣದ ವಿಧೇಯತೆ; "ಅವನ ಮಾತಿಗೆ ಒಪ್ಪಿಕೊಂಡವರು ಬಾಪ್ತಿಸ್ಮ ಮಾಡಿಸಿಕೊಂಡರು, ಆ ದಿವಸ ಸುಮಾರು ಮೂರು ಸಾವಿರ ಜನರು ಅವರಲ್ಲಿ ಸೇರಿದರು"[6]; (5) "ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿ ಮುರಿಯುವುದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು."[7]

ಪಂಚಾಶತ್ತಮ ದಿನವು "ಸಭೆಯ ಜನ್ಮ ದಿನವಾಗಿದೆ" ಎಂದು ಕರೆಯಲ್ಪಡಬಹುದು.

## II. ಯೆರೂಸಲೇಮಿನಲ್ಲಿ ಸಭೆಯ ಬೆಳವಣಿಗೆ.
## (ಅಪೊಸ್ತಲರ ಕೃತ್ಯಗಳು 3-7.)

**1. ಮೊದಲನೆಯ ಯೆಹೂದಿ ಹಿಂಸೆ.**-ಪಂಚಾಶತ್ತಮದ ನಂತರ, ಪೇತ್ರ ಮತ್ತು ಯೋಹಾನರು ದೇವಾಲಯದ ದ್ವಾರದ ಬಳಿಯಲ್ಲಿ ಒಬ್ಬ ಹುಟ್ಟು ಕುಂಟನನ್ನು ಗುಣಪಡಿಸಿದರು. ಅಲ್ಲಿ ಕೂಡಿಬಂದಿದ್ದ ಜನಸಮೂಹವು ಪಂಚಾಶತ್ತಮದ ಕಾರ್ಯವನ್ನು ಮುಂದುವರಿಸಲು ಒಂದು ಅವಕಾಶ ಕೊಟ್ಟರು. ಅವನ ಪ್ರಸಂಗವು ಸದ್ದುಕಾಯರಿಂದ ಮಧ್ಯದಲ್ಲಿ ತಡೆಯಲ್ಪಟ್ಟಿತು, ಅವರಿಗೆ ಪುನರುತ್ಥಾನದ ಪ್ರಸಂಗವು ವಿಶೇಷವಾಗಿ ಅಸಹ್ಯವಾದದ್ದಾಗಿತ್ತು, ಇಬ್ಬರು ಅಪೊಸ್ತಲರು ಸೆರೆಮನೆಗೆ ಹಾಕಲ್ಪಟ್ಟರು. ಪೇತ್ರನ ಬೋಧನೆಯ ಪರಿಣಾಮವು ಶಿಷ್ಯರ ಸಂಖ್ಯೆಯನ್ನು ಐದುಸಾವಿರಕ್ಕೆ ಏರಿಸಿತು.

ಮರುದಿನ ಪೇತ್ರ ಮತ್ತು ಯೋಹಾನ ಸನ್ಹೆದ್ರಿನಿನ ಮುಂದೆ ತರಲ್ಪಟ್ಟರು. ಅದು ಹೆಚ್ಚಾಗಿ ಸದ್ದುಕಾಯರಿಂದ ರಚಿಸಲ್ಪಟ್ಟಿತ್ತು. ಅವರು ಯಾವಬಲದಿಂದ ಅದ್ಭುತಕಾರ್ಯವನ್ನು ಮಾಡಿದರೆಂಬುದರ ಬಗ್ಗೆ ಪ್ರಶ್ನಿಸಲ್ಪಟ್ಟರು. ಅದು ಯೇಸುವಿನ ಬಲದಿಂದ ಎಂದು ಉತ್ತರಕೊಟ್ಟರು. ತಮಗೆ ನ್ಯಾಯಕೊಡಬೇಕಾಗಿದ್ದವರಿಗೆ ಧೈರ್ಯದಿಂದ ಬೇರೆ ಯಾವುದೇ ಹೆಸರಿನಿಂದ ರಕ್ಷಣೆಯು ಇರುವುದಿಲ್ಲ ಎಂದು ಹೇಳಿದರು. ಅಧಿಕಾರಿಗಳು ಅದ್ಭು ತ ಕಾರ್ಯವನ್ನು ಅಲ್ಲಗಳೆಯದವರಾಗಿದ್ದರು, ಮತ್ತು, ಹೆದರಿಸುವುದರಲ್ಲಿ ಅವರು ತೃಪ್ತಿಪಟ್ಟುಕೊಂಡು, ಅಪೊಸ್ತಲರನ್ನು ಹೋಗುವುದಕ್ಕೆ ಬಿಟ್ಟರು.

**2. ಒಳಗಿನಿಂದ ಗಂಡಾಂತರಗಳು; ಅನನೀಯ ಮತ್ತು ಸಪ್ಫೈರ.**-ಕ್ರೈಸ್ತ ದಯೆಯ ಉದಾ ಹರಣೆಯನ್ನು ಯೆರೂಸಲೇಮ ಸಭೆಯು ಒದಗಿಸುತ್ತದೆ (ಅಪೊಸ್ತಲರ ಕೃತ್ಯಗಳು 2:44, 45; 4:34-37). ಅದು ಮಾಡಲೇ ಬೇಕಾದದ್ದಾಗಿರಲಿಲ್ಲ (ಅಪೊಸ್ತಲರ ಕೃತ್ಯಗಳು 5:3, 4), ಆದರೆ ಸಂಪೂರ್ಣವಾಗಿ ಸ್ವಯಂ ಪ್ರೇರಿತವಾದದ್ದಾಗಿತ್ತು. ಅದು ವಿಶ್ವವ್ಯಾಪಿ ಯಾದದ್ದಾಗಲಿ ಇಲ್ಲವೇ ಸ್ಥಿರವಾದದ್ದಾಗಿಯಾಗಲಿ ಆಗಿರಲಿಲ್ಲ; ಅದರ ಭಾವನೆಯಲ್ಲಿ ಇಡೀ ಅಪೊಸ್ತಲಿಕ ಸಭೆಗೆ ಸಂಬಂಧಿಸಿದ್ದಾಗಿದ್ದರೂ, ಅದು ಯೆರೂಸಲೇಮ ಸಭೆಗೆ ಮಾತ್ರ ಒಳಪಟ್ಟಿತ್ತು. ಅನನೀಯ ಮತ್ತು ಸಪ್ಫೈರರು ತಮ್ಮ ಸೊತ್ತಿನ ಭಾಗವನ್ನು ಅಪೊಸ್ತಲರಿಗೆ ತಂದುಕೊಟ್ಟರು. ಅವರು ಕುಯುಕ್ತಿಯಿಂದ ಪ್ರೇರೇಪಿಸಲ್ಪಟ್ಟಿದ್ದರು. ಪೇತ್ರ ನಿಂದ ಅವರು ತಕ್ಷಣವೇ ಬಹಿರಂಗ ಪಡಿಸಲ್ಪಟ್ಟಿದ್ದು ಆತನ ಪಾದಗಳ ಬಳಿಯಲ್ಲಿ ಕೂಡಲೇ ಸತ್ತದ್ದು, ಇಡೀ ಸಭೆಯನ್ನು ಭಯದಿಂದ ತುಂಬಿಸಿತು, ಅದು ಧರ್ಮದಲ್ಲಿ ಅವಾಸ್ತವಿಕತೆಗೆ ವಿರುದ್ಧವಾಗಿ ಒಂದು ಸ್ಮಾರಕದಂತೆ ನೂತನ ಸಮಾಜದ ಹೊಸ್ತಿಲಲ್ಲಿ ನಿಂತುಕೊಳ್ಳುತ್ತದೆ, ಹನ್ನೆರಡು ಜನರಲ್ಲಿ ಮೊದಲನೆಯ ಮರಣವು ದ್ರೋಹಿಯದಾಗಿತ್ತು ಮತ್ತು ಆತ್ಮಹತ್ಯೆಯಾಗಿತ್ತು ಎಂಬುದು ಗಮನಿಸಬೇಕಾದ ಘಟನೆಯಾಗಿದೆ. ಹಾಗೂ ಅಪೊಸ್ತಲಿಕ ಸಭೆಯಲ್ಲಿ ಮೊದಲನೆಯ ಮರಣಗಳು ಕಪಟಿಗಳ ಹಾಗೂ ಸುಳ್ಳುಗಾರರ ಮರಣಗಳಾಗಿದ್ದವು.

**3. ಯೆಹೂದ್ಯರಿಂದ ಎರಡನೆಯ ಹಿಂಸೆ.**-ಅನನೀಯ ಮತ್ತು ಸಪ್ಫೈರರ ಮೇಲಿನ ನ್ಯಾಯ ತೀರ್ಪಿಕೆಯ ಹಾಗೆಯೇ ಎಲ್ಲಾ ನೀತಿಯ ಶಿಕ್ಷೆಯ ಪರಿಣಾಮವು ಸುವಾರ್ತೆಯ ಬಲವನ್ನು ಹೆಚ್ಚಿಸುವುದಾಗಿತ್ತು. ಸನ್ಹೆದ್ರಿನ್ ಕೂಟವು ಗಲಿಬಿಲಿಗೊಂಡು ರೋಷದಿಂದ ಎಲ್ಲಾ ಅಪೊಸ್ತಲರನ್ನು ಸೆರೆಮನೆಗೆ ಹಾಕಿತು, ಅವರಿಗಾಗಿ ದೇವರಿಗೆ ಮುಂದಿನ ಕಾರ್ಯವಿತ್ತು; ಮತ್ತು ಆತನ ದೇವದೂತನು ಸೆರೆಮನೆಯ ಬಾಗಿಲನ್ನು ತೆರೆದನು. ಹಾಗೂ ಸುವಾರ್ತೆ ಯನ್ನು ಸಾರಲು ಅವರನ್ನು ದೇವಾಲಯಕ್ಕೆ ಹಿಂದಿರುಗಿ ಕಳುಹಿಸಿದನು. ಅವರ ರಹಸ್ಯ ವಾದ ತಪ್ಪಿಸಿಕೊಳ್ಳುವಿಕೆಯಿಂದ ಚಕಿತರಾದ ಅಧಿಕಾರಿಗಳು ಅವರನ್ನು ಕೌನ್ಸಿಲಿನ ಮುಂದೆ ತಂದು ನಿಲ್ಲಿಸಿದರು. ಮನುಷ್ಯರಿಗಿಂತ - ದೇವರಿಗೆ ಹೆಚ್ಚು ವಿಧೇಯರಾಗುವ ತಮ್ಮ ಉದ್ದೇಶವನ್ನು ಅಪೊಸ್ತಲರು ಘೋಷಿಸಿದರು; ಗಮಲಿಯೇಲನ ಬುದ್ಧಿವಾದದಂತೆ ಸನ್ಹೆದ್ರಿನ್ನು ಕಠಿಣವಾದ ಕ್ರಮಗಳನ್ನು ಕೈಕೊಳ್ಳುವದರಿಂದ ತಡೆಹಿಡಿಯಲ್ಪಟ್ಟರು: "ಈ ಕೆಲಸವು ಮನುಷ್ಯರಿಂದಾಗಿದ್ದರೆ ತಾನೇ ಕೆಡುವುದು; ಅದು ದೇವರಿಂದಾಗಿದ್ದರೆ ಅದನ್ನು ನಿಮ್ಮಿಂದ ಕೆಡಿಸುವದಕ್ಕೆ ಆಗುವದಿಲ್ಲ."[8] ಗಮಲಿಯೇಲನು ಒಬ್ಬ ಫರಿಸಾಯನಾಗಿದ್ದನು, ಪೌಲನ ಬೋಧಕನು (ಅಪೊಸ್ತಲರ ಕೃತ್ಯಗಳು 22:3). ಈ ಮೊದಲಿನ ಹಿಂಸೆಗಳಲ್ಲಿ ಫರಿಸಾಯರು ಚಟುವಟಿಕೆಯ ಭಾಗವನ್ನು ತೆಗೆದುಕೊಳ್ಳಲಿಲ್ಲವೆಂದು ತೋರುತ್ತದೆ.

**4. ಕೆಲಸದ ಮೊದಲನೆಯ ವಿಭಜನೆ.**-ಸಭೆಯು ಬೇಗನೇ ಭಿನ್ನ ಹಿನ್ನೆತಿಯವರನ್ನೊಳ ಗೊಂಡದ್ದಾಯಿತು. ಪಂಚಾಶತ್ತಮದ ದಿನ ಪೇತ್ರನ ಶ್ರೋತೃಗಳಿಗೆ (ಅಪೊಸ್ತಲರ ಕೃತ್ಯಗಳು 2:8-11) ಸಭೆಯಲ್ಲಿ ಪ್ರತಿ ಜೊತೆಗಾರರಾದರು, ಯೆಹೂದಿ ರಕ್ತದ ಜನರು

ಪಲೆಸ್ತೀನಿನ ಹೊರಗಿನ ದೇಶಗಳಲ್ಲಿ ಜನಿಸಿದವರು ಹೆಲ್ಲೆನಿಸ್ಟರ ಇಲ್ಲವೇ "ಗ್ರೇಸಿಯನ್ ಯೆಹೂದ್ಯರು" ಎಂದು ಕರೆಯಲ್ಪಟ್ಟರು. ಅವರು ಅಪೊಸ್ತಲರ ಕೃತ್ಯದಲ್ಲಿ "ಇಬ್ರಿಯರೊಂದಿಗೆ," ಇಲ್ಲವೇ ಪಾಲೆಸ್ತೀನಿಯನ್ ಯೆಹೂದ್ಯರೊಂದಿಗೆ ಆಗಾಗ ವ್ಯತಿರಿಕ್ತವಾಗಿ ಕಾಣಿಸಿಕೊಳ್ಳುತ್ತಾರೆ. ಎರಡು ವರ್ಗಗಳ ಮಧ್ಯದಲ್ಲಿಯ ಅಸೂಯೆಯು ಕೆಲಸದ ಮೊದಲನೆಯ ವಿಭಜನೆಗೆ ಕಾರಣವಾಯಿತು, ಸಭೆಯ ಸಂಘಟನೆಯು ಒಂದು ವಿಕಾಸವಾಗುವದಾಗಿದೆ ಮೊದಲು ಅಪೊಸ್ತಲರು ಎಲ್ಲಾ ಹುದ್ದೆಗಳನ್ನು ತುಂಬಿಕೊಂಡಿದ್ದರು, ಅನುದಿನದ ಆಹಾರ ವಿತರಣೆಯ ಬಗೆಗಿದ್ದ ಗುಣುಗುಟ್ಟುವಿಕೆಯನ್ನು ಸರಿಪಡಿಸಲು, ಅಪೊಸ್ತಲರ ಶಿಫಾರಸಿನ ಮೇಲೆ ಕಾರ್ಯ ನಿರ್ವಹಿಸಲು ಎಲ್ಲಾ ಗ್ರೀಕ ಹೆಸರುಗಳೊಂದಿಗೆ ಇದ್ದ ಏಳು ಜನರನ್ನು ಸಭೆಯು ಆಯ್ದುಕೊಂಡಿತ್ತು. ಈ ರೀತಿಯಲ್ಲಿ ಡೀಕನ್ ಹುದ್ದೆಯು ಬಂದಿತು. ಹೀಗೆ ಅಪೊಸ್ತಲರು ತಮ್ಮನ್ನು ಸಂಪೂರ್ಣವಾಗಿ ಪ್ರಾರ್ಥನೆಗೂ ವಾಕ್ಯದ ಸೇವೆಗೂ ಸಮರ್ಪಿಸಿಕೊಳ್ಳಲು ಶಕ್ತರಾದರು. ಒಳ್ಳೇ ಪರಿಣಾಮವು ಸುವಾರ್ತೆಗಾಗಿ ವಿಶಾಲವಾದ ಜಯಗಳಲ್ಲಿ ಕಂಡು ಬಂದಿತು, ಅನೇಕ ಯಾಜಕರು ವಿಶ್ವಾಸಕ್ಕೆ ವಿಧೇಯರಾದರು.

**5. ಮೊದಲನೆಯ ಕ್ರೈಸ್ತ ಹತಸಾಕ್ಷಿ** (6:8-7:60).-ಸಭೆಯು ತಾನು ತಿಳಿದದ್ದಕ್ಕಿಂತಲೂ ಹೆಚ್ಚು ಉತ್ತಮವಾದದ್ದನ್ನು ಆಯ್ಕೆಮಾಡಿಕೊಂಡಿತ್ತು, ಏಳು ಜನ ಡೀಕನರಲ್ಲಿ ಒಬ್ಬನಾದ ಸ್ತೆಫನನು ಗ್ರೀಕ್ ವಿಧವೆಯರಿಗೆ ಊಟಬಡಿಸುವುದರಿಂದ ಪ್ರಾರಂಭಿಸಿದನು; ಹೆಲ್ಲೆನಿಸ್ಟಿಕ್ ಸಭಾಮಂದಿರಗಳಲ್ಲಿ ಜೀವದ ರೊಟ್ಟಿಯನ್ನು ಮುರಿಯುವದರಲ್ಲಿ ತಡಮಾಡಲಿಲ್ಲ.

ಇಲ್ಲಿಯ ವರೆಗೆ ಶಿಷ್ಯರು, ಯೆಹೂದ್ಯರಿಂದಲೂ ಸಹ, ಯೆಹೂದ್ಯರ ಒಂದು ವಿಶಿಷ್ಟವಾದ ಭಾಗವೆಂದು ತಿಳಿಯಲ್ಪಡುತ್ತಿದ್ದ ಅನ್ಯ ಜನಾಂಗದವರನ್ನು ಕೂಡಿಸಿಕೊಳ್ಳುವ ಕಾರ್ಯದ ವಿಸ್ತರಣೆಯ ಬಗ್ಗೆ ಸ್ಪಷ್ಟವಾದ ವಿಚಾರವಿರಲಿಲ್ಲ. ಆದರೆ ಸ್ತೆಫನನು ಯೂದಾಯತ್ವವನ್ನು ತೆಗೆದು ಹಾಕುವದರ ಕಡೆಗೆ ಸ್ಪಷ್ಟವಾಗಿ ನೋಡಲು ಪ್ರಾರಂಭಿಸಿದನು. ಇದು ಎಲ್ಲಾ ಯೆಹೂದ್ಯರ ಮೃದು ಭಾಗವನ್ನು ತಟ್ಟಿತು. ಹೆಲೆನಿಸ್ಟರು, ಚರ್ಚೆಯಲ್ಲಿ ಸೋಲಿಸಲ್ಪಟ್ಟವರು ಹಿಂಸಿಸುವದನ್ನು ಆಶ್ರಯಿಸಿಕೊಂಡರು, ಮತ್ತು ಈಗ ಫರಿಸಾಯರು ಚಟುವಟಿಕೆಯುಳ್ಳವರಾದರು. ಎರಡನೆ ಹಿಂಸೆಯಲ್ಲಿ, ಫರಿಸಾಯನಾದ ಗಮಲಿಯೇಲನು ಪೇತ್ರನನ್ನು ಕಾಪಾಡುವವನಾಗಿ ಕಂಡುಬರುತ್ತಾನೆ; ಮೂರನೆಯದರಲ್ಲಿ ಅವನ ವಿದ್ಯಾರ್ಥಿ, ಪೌಲನು, ಸ್ತೆಫನನ ಹಿಂಸಕನಾಗಿ ಕಂಡುಬರುತ್ತಾನೆ; ಹೀಗೆ ಸ್ತೆಫನನು ಯೆರೂಸಲೇಮ ಸಭೆಯಲ್ಲಿ ಅತ್ಯಂತ ಪ್ರಗತಿಪರನಾಗಿ ಕಂಡುಬಂದನು ಮತ್ತು ಮೊದಲನೆಯ ಕ್ರೈಸ್ತ ಹತಸಾಕ್ಷಿಯಾದನು. ತನ್ನ ಒಡೆಯನ ಭಾವನೆಯಲ್ಲಿ ಅವನು ಈ ಪ್ರಾರ್ಥನೆಯೊಂದಿಗೆ ಮರಣಹೊಂದಿದನು: "ಕರ್ತನೇ ಈ ಪಾಪವನ್ನು ಅವರ ಮೇಲೆ ಹೊರಿಸಬೇಡ."[9] ಸಭೆಯು ಸ್ತೆಫನನ್ನು ಕಳೆದುಕೊಂಡಿತು, ಆದರೆ ಬೇಗನೇ ಪೌಲನನ್ನು ಪಡೆದುಕೊಂಡಿತು; ಸೇಂಟ್ ಔಗುಸ್ತೀನನೊಂದಿಗೆ ನಾವು ಹೀಗೆ ಹೇಳಬಹುದು, -

*Si Stephanus non orasset,*
*Ecclesia Paulum non haberet.*

ಸ್ತೆಫನನು ಪ್ರಾರ್ಥಿಸಿರದಿದ್ದರೆ,
ಸಭೆಗೆ ಪೌಲನು ಇರುತ್ತಿರಲಿಲ್ಲ.

ಟಿಪ್ಪಣಿಗಳು

[1]ಸಭೆಯನ್ನು ಸ್ಥಾಪಿಸುವುದಕ್ಕಾಗಿ ಇನ್ನೊಂದು ದಿನಾಂಕವು ಕ್ರಿ.ಶ. 33. [2]ಅಪೊಸ್ತಲರ ಕೃತ್ಯಗಳು 2:4. [3]ಅಪೊಸ್ತಲರ ಕೃತ್ಯಗಳು 2:37. [4]ಅಪೊಸ್ತಲರ ಕೃತ್ಯಗಳು 2:37. [5]ಅಪೊಸ್ತಲರ ಕೃತ್ಯಗಳು 2:38. [6]ಅಪೊಸ್ತಲರ ಕೃತ್ಯಗಳು 2:41. [7]ಅಪೊಸ್ತಲರ ಕೃತ್ಯಗಳು 2:42. [8]ಅಪೊಸ್ತಲರ ಕೃತ್ಯಗಳು 5:38, 39. [9]ಅಪೊಸ್ತಲರ ಕೃತ್ಯಗಳು 7:60.

© 2009 Truth for Today